# ಐ ಡೋಂಟ್ ಲೈಕ್ ದಿಸ್: ಸಚಿವರ ಗೈರಿಗೆ ಸಭಾಪತಿ ಗರಂ

ವಿಧಾನ ಪರಿಷತ್ತು: ಭೋಜನ ವಿರಾಮದ ನಂತರ ಆರಂಭವಾದ ಕಲಾಪಕ್ಕೆ ಆಡಳಿತ ಪಕ್ಷದ ಸಚಿವರು ಹಾಜರಾಗದೇ ಇರುವುದಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ಗರಂ ಆಗಿ ನಾಳೆಯವರೆಗೆ ಕಲಾಪವನ್ನು ಮುಂದೂಡುವ ಹಂತಕ್ಕೂ ತಲುಪಿದ ಪ್ರಸಂಗ ನಡೆಯಿತು. 'ಐ ಡೋಂಟ್ ಲೈಕ್ ದಿಸ್' ಎನ್ನುವ ಮೂಲಕ ಅಸಮಾಧಾನ ಹೊರಹಾಕಿದರು. ಸಚಿವರ ಗೈರು ಹಾಜರಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಸಭಾತ್ಯಾಗ ಮಾಡಿದ್ದರು.



ಭೋಜನ ವಿರಾಮದ ನಂತರ ಕಲಾಪ ಆರಂಭವಾಗಲು ಬೆಲ್ ಮಾಡಲಾಯಿತು. ಆದರೆ ಸಾಕಷ್ಟು ಸಮಯ ಕಳೆದರೂ ಆಡಳಿತ ಪಕ್ಷದ ಸದಸ್ಯರು ಹಾಜರಾತಿ ಬೆರಳಣಿಕೆಯಷ್ಟೂ ಇರಲಿಲ್ಲ, ಹೀಗಾಗಿ ಪುನ: ಕಲಾಪವನ್ನು 10 ನಿಮಿಷಗಳ ಮುಂದೂಡಿದರು. ನಂತರ ಕಲಾಪವನ್ನು ಆರಂಭಿಸಿದಾಗಲೂ ಸಚಿವರು ಹೊರತುಪಡಿಸಿ ಬಹುತೇಕ ಸದಸ್ಯರು ಗೈರಾಗಿದ್ದರು. ಆಗ ಅಸಮಾಧಾನ ಹೊರಹಾಕಿದ ಸಭಾಪತಿ ಬಸವರಾಜ ಹೊರಟ್ಟಿ, ಈ ಹಿಂದೆಯೂ ಸಚಿವರು, ಸದಸ್ಯರು ಸದನಕ್ಕೆ ಬರಲು ಹೇಳಿರುವೆ, ಸದನಕ್ಕಿಂತ ಮುಖ್ಯವಾದ ಕೆಲಸ ಮತ್ತೊಂದು ಏನಿದೆ ಎಂದು ಪ್ರಶ್ನಿಸಿದರು. ಸದಸ್ಯರೇ ಬಾರದೇ ಹೋದರೆ ಚರ್ಚೆ ಯಾರಿಗೆ ಮಾಡಬೇಕು, ನಾನು ಕಲಾಪವನ್ನು ಮುಂದೂಡುವೆ ಎಂದರು. ಆಗ ಮುಖ್ಯ ಸಚೇತಕ ಸಲೀಂ ಅಹ್ಮದ್, 'ಈಗ ಬರುತ್ತಾರೆ' ಎಂದು ಸಮಜಾಯಿಷಿ ನೀಡಲು ಮುಂದಾದರು. 'ಬರುತ್ತಾರೆ ಎಂದರೇನು? ಐ ಡೋಂಟ್ ಲೈಕ್ ಇಟ್' ಎಂದು ಅಸಮಾಧಾನ ಹೊರಹಾಕಿದರು.